All India Radio: Bangalore
National Bulletin In Kannada
14.01.2026 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<>><><*><><<>

ಮುಖ್ಯಾಂಶಗಳು

೧. ೨೮ನೇಕಾಮನ್‌ವೆಲ್ತ್ ಸ್ಪೀಕರ್‌ಗಳು ಮತ್ತು ಪೀಠಾಸೀನಾಧಿಕಾರಿಗಳ ಸಮ್ಮೇಳನ ನವದೆಹಲಿಯಲ್ಲಿ ಇಂದು ಆರಂಭ

೨. ಪ್ರಧಾನಿ ನರೇಂದ್ರ ಮೋದಿ, ಫ್ರಾನ್ಸ್ ಅಧ್ಯಕ್ಷರ ರಾಜತಾಂತ್ರಿಕ ಸಲಹೆಗಾರ ಇಮ್ಯಾನ್ಯುಯೆಲ್ ಬಾನ್ ಭೇಟಿ; ಕಾರ್ಯತಂತ್ರದ ಪಾಲುದಾರಿಕೆ ಕುರಿತು ಚರ್ಚೆ

೩. ದೇಶಾದ್ಯಂತ ಇಂದು ಸುಗ್ಗಿಯ ಹಬ್ಬ ಮಕರ ಸಂಕ್ರಾಂತಿ ಸಂಭ್ರಮ

೪. ಹತ್ತನೇ ಸಶಸ್ತ್ರ ಪಡೆಗಳ ನಿವೃತ್ತ ಸೈನಿಕರ ದಿನದ ಆಚರಣೆಯಲ್ಲಿಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗಿ

೫. ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್; ಗುಜರಾತ್ ಜೈಂಟ್ಸ್ ವಿರುದ್ಧ ಮುಂಬೈ ಇಂಡಿಯನ್ಸ್‌ಗೆ ಏಳು ವಿಕೆಟ್‌ಗಳ ಜಯ

<>><><*><><<>

೨೮ನೇಕಾಮನ್‌ವೆಲ್ತ್ ಸ್ಪೀಕರ್‌ಗಳು ಮತ್ತು ಪೀಠಾಸೀನಾಧಿಕಾರಿಗಳ ಸಮ್ಮೇಳನ - CSPOC ನವದೆಹಲಿಯಲ್ಲಿ ಇಂದು ಆರಂಭವಾಗಲಿದೆ. ಮೂರು ದಿನಗಳ ಈ ಸಮ್ಮೇಳನ, ೬೦ ಕ್ಕೂ ಹೆಚ್ಚು ಕಾಮನ್‌ವೆಲ್ತ್ ರಾಷ್ಟ್ರಗಳು ಮತ್ತು ಅರೆ-ಸ್ವಾಯತ್ತ ಸಂಸತ್ತುಗಳ ಸ್ಪೀಕರ್‌ಗಳು ಮತ್ತು ಪೀಠಾಸೀನಾಧಿಕಾರಿಗಳನ್ನು ಒಟ್ಟುಗೂಡಿಸುತ್ತದೆ. ಸಂಸದೀಯ ಪ್ರಜಾಪ್ರಭುತ್ವದ ಕುರಿತು ಜ್ಞಾನ ಮತ್ತು ತಿಳುವಳಿಕೆಯನ್ನು ಉತ್ತೇಜಿಸುವುದು ಹಾಗೂ ಸಂಸದೀಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು ಈ ಸಮ್ಮೇಳನದ ಉದ್ದೇಶವಾಗಿದೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಈ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. ಮೊದಲ ದಿನವಾದ ಇಂದು, ಸ್ಥಾಯಿ ಸಮಿತಿಯ ಸಭೆ ನಡೆಯಲಿದೆ. ೨೮ ನೇ CSPOC ಯ ಅಧ್ಯಕ್ಷರಾಗಿ, ಓಂ ಬಿರ್ಲಾ ಅವರು ಸ್ಥಾಯಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ನಾಳೆ ಸಂವಿಧಾನ್ ಸದನದ ಐತಿಹಾಸಿಕ ಸೆಂಟ್ರಲ್ ಹಾಲ್‌ನಲ್ಲಿ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ.

ಪ್ರಧಾನಿ ಅವರು ಕಾಮನ್‌ವೆಲ್ತ್ ಮತ್ತು ಸ್ವಾಯತ್ತ ಸಂಸತ್ತುಗಳ ಸ್ಪೀಕರ್‌ಗಳು ಮತ್ತು ಪೀಠಾಸೀನಾಧಿಕಾರಿಗಳೊಂದಿಗೆ ಅನೌಪಚಾರಿಕ ಸಂವಾದ ಕೂಡ ನಡೆಸಲಿದ್ದಾರೆ. ಸಂಸತ್ತಿನಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ, ಭಾಗವಹಿಸುವವರಲ್ಲಿ ಉತ್ತಮ ಅಭ್ಯಾಸಗಳು ಮತ್ತು ನವೀನ ವಿಚಾರಗಳ ಹಂಚಿಕೆ, ಸಂಸದರ ಮೇಲೆ ಸಾಮಾಜಿಕ ಮಾಧ್ಯಮದ ಪ್ರಭಾವ, ಸಂಸತ್ತಿನ ಬಗ್ಗೆ ಸಾರ್ವಜನಿಕ ತಿಳುವಳಿಕೆಯನ್ನು ಹೆಚ್ಚಿಸುವುದು ಮತ್ತು ಸಂಸದರ ಭದ್ರತೆ, ಆರೋಗ್ಯ ಮತ್ತು ಯೋಗಕ್ಷೇಮ ಸೇರಿದಂತೆ ವಿವಿಧ ವಿಷಯಗಳ ಕುರಿತು ಸಮ್ಮೇಳನದ ಸಮಯದಲ್ಲಿ ಹಲವು ಅಧಿವೇಶನಗಳು ನಡೆಯಲಿವೆ. ೨೮ ನೇ CSPOC ಮುಕ್ತಾಯದ ನಂತರ, ಲೋಕಸಭಾ ಸ್ಪೀಕರ್ CSPOC ಅಧ್ಯಕ್ಷ ಸ್ಥಾನವನ್ನು ಯುಕೆ ಹೌಸ್ ಆಫ್ ಕಾಮನ್ಸ್‌ನ ಸ್ಪೀಕರ್ ಲಿಂಡ್ಸೆ ಹೊಯ್ಲ್ ಅವರಿಗೆ ಹಸ್ತಾಂತರಿಸಲಿದ್ದಾರೆ.

<>><><*><><<>

ಲೋಕಸಭಾಧ್ಯಕ್ಷ ಓಂ ಬಿರ್ಲಾ ನಿನ್ನೆ ನವದೆಹಲಿಯಲ್ಲಿ ದಕ್ಷಿಣ ಆಫ್ರಿಕಾ ಮತ್ತು ಗ್ರೆನಡಾದ ಸಂಸದೀಯ ನಿಯೋಗಗಳನ್ನು ಭೇಟಿಯಾದರು. ಕಾಮನ್‌ವೆಲ್ತ್ ಸ್ಪೀಕರ್‌ಗಳು ಮತ್ತು ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಈ ನಿಯೋಗಗಳು ಭಾರತಕ್ಕೆ ಬಂದಿವೆ. ವಿಶೇಷವಾಗಿ ಈ ನಿಯೋಗ, ಲೋಕಸಭಾಧ್ಯಕ್ಷರೊಂದಿಗೆ ಲೋಹ್ರಿ ಹಬ್ಬವನ್ನು ಆಚರಿಸಿತು. ಭಾರತೀಯ ಹಬ್ಬಗಳು ಮತ್ತು ಸಾಂಸ್ಕೃತಿಕ ಸಂವಾದ, ಜಾಗತಿಕ ಭ್ರಾತೃತ್ವ, ಪರಸ್ಪರ ಗೌರವ ಮತ್ತು ಮಾನವೀಯ ಮೌಲ್ಯಗಳನ್ನು ಬಲಪಡಿಸುತ್ತದೆ ಎಂದು ಸ್ಪೀಕರ್ ಓಂ ಬಿರ್ಲಾ ತಿಳಿಸಿದರು. ದಕ್ಷಿಣ ಆಫ್ರಿಕಾ ಸಂಸತ್ತಿನ ರಾಷ್ಟ್ರೀಯ ಪ್ರಾಂತ್ಯಗಳ ಮಂಡಳಿಯ ಉಪಾಧ್ಯಕ್ಷ ಎಲ್. ಗೋವೆಂದರ್, ಉಪಾಧ್ಯಕ್ಷೆ ಡಾ. ಅನ್ನೆಲಿ ಲೊಟ್ರಿಯೆಟ್ ಮತ್ತು ಗ್ರೆನಡಾ ಸೆನೆಟ್ ಅಧ್ಯಕ್ಷೆ ಡಾ. ಡೆಸ್ಸಿಮಾ ವಿಲಿಯಮ್ಸ್ ನಿಯೋಗದ ನೇತೃತ್ವ ವಹಿಸಿದ್ದರು. ಸಭೆಯ ಸಮಯದಲ್ಲಿ, ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ಪ್ರಜಾಪ್ರಭುತ್ವ ಮೌಲ್ಯಗಳು, ಸಂಸದೀಯ ಸಹಕಾರ ಮತ್ತು ಪರಸ್ಪರ ತಿಳುವಳಿಕೆಯನ್ನು ಬಲಪಡಿಸುವ ಮೇಲೆ ಕೇಂದ್ರೀಕರಿಸುವ ಮೂಲಕ ಸೌಹಾರ್ದಯುತ ದ್ವಿಪಕ್ಷೀಯ ಚರ್ಚೆಗಳು ನಡೆದವು.

<>><><*><><<>

ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರ ರಾಜತಾಂತ್ರಿಕ ಸಲಹೆಗಾರ ಎಮ್ಯಾನುಯೆಲ್ ಬಾನ್ ಅವರು ನಿನ್ನೆ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾದರು.

ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ, ಬಹು ಕ್ಷೇತ್ರಗಳಲ್ಲಿ ನಿಕಟ ಸಹಕಾರದಿಂದ ಗುರುತಿಸಲ್ಪಟ್ಟ ಭಾರತ-ಫ್ರಾನ್ಸ್ ಕಾರ್ಯತಂತ್ರದ ಪಾಲುದಾರಿಕೆಯನ್ನು ಸಲಹೆಗಾರ ಎಮ್ಯಾನುಯೆಲ್ ಬಾನ್ ಪುನರುಚ್ಚರಿಸಿದ್ದಾರೆ. ವಿಶೇಷವಾಗಿ ಭಾರತ-ಫ್ರಾನ್ಸ್ ನಾವೀನ್ಯತೆಯ ವರ್ಷವನ್ನು ಗುರುತಿಸುತ್ತಿರುವುದರಿಂದ, ನಾವೀನ್ಯತೆ, ತಂತ್ರಜ್ಞಾನ ಮತ್ತು ಶಿಕ್ಷಣಕ್ಕೆ ಸಹಯೋಗವು ವಿಸ್ತರಿಸುತ್ತಿರುವುದು ಉತ್ತೇಜನಕಾರಿಯಾಗಿದೆ ಎಂದು ಹೇಳಿದರು. ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರನ್ನು ಶೀಘ್ರದಲ್ಲೇ ಭಾರತಕ್ಕೆ ಸ್ವಾಗತಿಸಲು ಎದುರು ನೋಡುತ್ತಿರುವುದಾಗಿ ಪ್ರಧಾನಿ ತಿಳಿಸಿದರು.

<>><><*><><<>

ದೇಶದ ವಿವಿಧ ಭಾಗಗಳಲ್ಲಿ ಇಂದು ಸುಗ್ಗಿಯ ಹಬ್ಬವಾದ ಮಕರ ಸಂಕ್ರಾಂತಿಯನ್ನು ಆಚರಿಸಲಾಗುತ್ತಿದೆ. ಸೂರ್ಯ ಮಕರ ಸಂಕ್ರಾಂತಿ ಚಳಿಗಾಲದ ಅಂತ್ಯ ಮತ್ತು ದೀರ್ಘ ಹಗಲಿನ ಆರಂಭವನ್ನು ಸೂಚಿಸುತ್ತದೆ. ದೇಶದ ವಿವಿಧ ಭಾಗಗಳಲ್ಲಿ ಈ ಹಬ್ಬವನ್ನು ವಿಭಿನ್ನ ಹೆಸರುಗಳಿಂದ ಕರೆಯಲಾಗುತ್ತದೆ. ಇದನ್ನು ತಮಿಳುನಾಡಿನಲ್ಲಿ ಪೊಂಗಲ್, ಗುಜರಾತ್‌ನಲ್ಲಿ ಉತ್ತರಾಯಣ, ಅಸ್ಸಾಂನಲ್ಲಿ ಭೋಗಲಿ ಬಿಹು ಮತ್ತು ಪಶ್ಚಿಮ ಬಂಗಾಳದಲ್ಲಿ ಪೌಷ್ ಸಂಕ್ರಾಂತಿ ಎಂದು ಆಚರಿಸಲಾಗುತ್ತದೆ. ಮಕರ ಸಂಕ್ರಾಂತಿ ಭಾರತದ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಇದು ಸೂರ್ಯನು ಧನುರ್ ರಾಶಿಯಿದ ಮಕರರಾಶಿಗೆ ಪ್ರವೇಶಿಸುವ ದಿನವನ್ನು ಸೂಚಿಸುತ್ತದೆ. ಇಂದಿನಿಂದ ಉತ್ತರಾಯಣ ಪರ್ವಕಾಲವು ಆರಂಭವಾಗುತ್ತದೆ. ಇದನ್ನು ಶುಭಕಾಲವೆಂದು ಪರಿಗಣಿಸಲಾಗುತ್ತದೆ. ಇದು ಕೃಷಿಯೊಂದಿಗೆ ನೇರ ಸಂಬಂಧ ಹೊಂದಿದ್ದು, ರೈತರು ತಾವು ಬೆಳೆದ ಧಾನ್ಯರಾಶಿಯನ್ನಿಟ್ಟು ಪ್ರಕೃತಿ ಹಾಗು ಸೂರ್ಯನನ್ನು ಪೂಜಿಸುತ್ತಾರೆ. ಇದನ್ನು ಎಳ್ಳು, ಬೆಲ್ಲ ಹಬ್ಬವೆಂದು ಕರೆಯುತ್ತಾರೆ.

<>><><*><><<>

ಕೇರಳದ ಶಬರಿಮಲೆ ಬೆಟ್ಟದ ದೇವಾಲಯದಲ್ಲಿಂದು, ಮಕರ ವಿಳಕ್ಕು ಹಬ್ಬವನ್ನು ಆಚರಿಸಲಿದ್ದು, ಮಕರ ಸಂಕ್ರಮಣ ರಾತ್ರಿಯೊಂದಿಗೆ ಭಕ್ತರು ಪೊನ್ನಂಬಲಮೇಡುವಿನಲ್ಲಿ ಮಕರಜ್ಯೋತಿಯನ್ನು ವೀಕ್ಷಿಸಲಿದ್ದಾರೆ. ಇದರ ಅಂಗವಾಗಿ ಅಯ್ಯಪ್ಪ ಸ್ವಾಮಿಯ ಪವಿತ್ರ ಆಭರಣಗಳಾದ ತಿರುವಾಭರಣದೊಂದಿಗೆ ಮೆರವಣಿಗೆ ಸೇರಿದಂತೆ ಆಚರಣೆಗಳು ನಡೆಯಲಿವೆ. ವಿವಿಧ ಸ್ಥಳಗಳಿಂದ ಅಗಮಿಸಿರುವ ಸಾವಿರಾರು ಭಕ್ತರು ಈಗಾಗಲೇ ಪ್ರದೇಶವನ್ನು ತಲುಪಿದ್ದಾರೆ.

ಸನ್ನಿಧಾನಂ ಮತ್ತು ಮಕರಜ್ಯೋತಿ ವೀಕ್ಷಣಾ ಕೇಂದ್ರಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಆಚರಣೆಯ ಸಮಯದಲ್ಲಿ ಯಾತ್ರಿಕರ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ. ಇಂದು ವರ್ಚುವಲ್ ಕ್ಯೂ ಮೂಲಕ ಕೇವಲ ೩೦ ಸಾವಿರ ಭಕ್ತರಿಗೆ ಮಾತ್ರ ಅವಕಾಶ ನೀಡಲಾಗುವುದು.

<>><><*><><<>

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಂದು ನವದೆಹಲಿಯಲ್ಲಿ ೧೦ ನೇ ಸಶಸ್ತ್ರ ಪಡೆಗಳ ನಿವೃತ್ತ ಸೈನಿಕರ ದಿನದ ಆಚರಣೆಯಲ್ಲಿ ಭಾಗವಹಿಸಲಿದ್ದಾರೆ. ೧೯೫೩ ರಲ್ಲಿ ಈ ದಿನದಂದು ನಿವೃತ್ತರಾದ ಭಾರತೀಯ ಸೇನೆಯ ಮೊದಲ ಕಮಾಂಡರ್-ಇನ್-ಚೀಫ್ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಪರಂಪರೆ ಮತ್ತು ಸೇವೆಯನ್ನು ಗೌರವಿಸಲು ಪ್ರತಿ ವರ್ಷ ಜನವರಿ ೧೪ ರಂದು ಸಶಸ್ತ್ರ ಪಡೆಗಳ ನಿವೃತ್ತ ಸೈನಿಕ ದಿನವನ್ನು ಆಚರಿಸಲಾಗುತ್ತದೆ. ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರು, ಸೇವೆ, ಶಿಸ್ತು ಮತ್ತು ದೇಶಭಕ್ತಿಯ ಶಾಶ್ವತ ಪರಂಪರೆಗೆ ಅಡಿಪಾಯ ಹಾಕಿದರು. ದೇಶಾದ್ಯಂತ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ೩೪ ರಾಜ್ಯ ಸೈನಿಕ ಮಂಡಳಿಗಳಲ್ಲಿ ಮತ್ತು ಭಾರತದಾದ್ಯಂತದ ವಿವಿಧ ಸ್ಥಳಗಳಲ್ಲಿ ४೩४ ಜಿಲ್ಲಾ ಸೈನಿಕ ಮಂಡಳಿಗಳು ಈ ದಿನವನ್ನು ಆಚರಿಸಿ ಅವರನ್ನು ಸ್ಮರಿಸಲಿವೆ.

<>><><*><><<>

ಜಮ್ಮು ಮತ್ತು ಕಾಶ್ಮೀರದ ಶಕ್ಸ್‌ಗಮ್ ಕಣಿವೆಗೆ ಸಂಬಂಧಿಸಿದಂತೆ ಚೀನಾ ಮತ್ತು ಪಾಕಿಸ್ತಾನ ನಡುವಿನ ೧೯೬೩ ರ ಒಪ್ಪಂದ ಕಾನೂನುಬಾಹಿರ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಪ್ರತಿಪಾದಿಸಿದರು. ನವದೆಹಲಿಯಲ್ಲಿ ನಿನ್ನೆ ಶಕ್ಸ್‌ಗಮ್ ಕಣಿವೆಯ ಕುರಿತು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರರ ಹೇಳಿಕೆಯ ಕುರಿತು ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯೆ ನೀಡಿರುವ ಜನರಲ್ ದ್ವಿವೇದಿ, ಕಣಿವೆಯ ಕುರಿತು ನವದೆಹಲಿಯ ನಿಲುವನ್ನು ಪುನರುಚ್ಚರಿಸಿದ ಸೇನಾ ಮುಖ್ಯಸ್ಥರು, ಶಕ್ಸ್‌ಗಮ್ ಕಣಿವೆಯಲ್ಲಿ ಯಾವುದೇ ಚಟುವಟಿಕೆಗಳನ್ನು ಭಾರತ ಅನುಮೋದಿಸುವುದಿಲ್ಲ. ಚೀನಾದೊಂದಿಗಿನ ಗಡಿ ನಿಯಂತ್ರಣ ರೇಖೆ-ಎಲ್‌ಒಸಿ ಪರಿಸ್ಥಿತಿ ಸ್ಥಿರವಾಗಿದೆ, ಆದರೆ ಅದರ ನಿರಂತರ ನಿಗಾವಹಿಸುವಿಕೆಯ ಅಗತ್ಯವಿದೆ ಎಂದು ಹೇಳಿದರು.

<>><><*><><<>

ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ನಿನ್ನೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದರು. ಈ ವೇಳೆ, ವ್ಯಾಪಾರ, ನಿರ್ಣಾಯಕ ಖನಿಜಗಳು, ಪರಮಾಣು ಶಕ್ತಿ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿನ ಸಹಕಾರದ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

ಭಾರತಕ್ಕೆ ಅಮೆರಿಕದ ರಾಯಭಾರಿಯಾಗಿ ಹೊಸದಾಗಿ ನೇಮಕಗೊಂಡಿರುವ ಸೆರ್ಗಿಯೊ ಗಾರ್, ಉಭಯ ರಾಷ್ಟ್ರಗಳು ವ್ಯಾಪಾರ ವಿಷಯದ ಕುರಿತು ಚರ್ಚಿಸಲು ಪರಸ್ಪರ ಸಂಪರ್ಕಿಸಲಿವೆ ಎಂದು ಹೇಳಿದ ಒಂದು ದಿನದ ನಂತರ ಈ ದೂರವಾಣಿ ಸಂಭಾಷಣೆ ನಡೆಸಲಾಗಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಸಚಿವ ಡಾ.ಎಸ್.ಜೈಶಂಕರ್, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರೊಂದಿಗೆ ಉತ್ತಮ ಸಂಭಾಷಣೆಯನ್ನು ನಡೆಸಿರುವುದಾಗಿ ತಿಳಿಸಿದರು. ಉಭಯ ನಾಯಕರು ವ್ಯಾಪಾರ, ನಿರ್ಣಾಯಕ ಖನಿಜಗಳು, ಪರಮಾಣು ಸಹಕಾರ, ರಕ್ಷಣೆ ಮತ್ತು ಇಂಧನದ ಬಗ್ಗೆ ಚರ್ಚಿಸಿದರು ಎಂದು ಅವರು ಹೇಳಿದರು.

<>><><*><><<>

ನವಿ ಮುಂಬೈನ ಡಾ. ಡಿ.ವೈ. ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಿನ್ನೆ ರಾತ್ರಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು ಗುಜರಾತ್ ಜೈಂಟ್ಸ್ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿದೆ. ಗುಜರಾತ್ ಜೈಂಟ್ಸ್ ನೀಡಿದ್ದ ೧೯೩ ರನ್‌ಗಳ ಗುರಿಯನ್ನು ಬೆನ್ನಟ್ಟಿದ ಮುಂಬೈ ಇಂಡಿಯನ್ಸ್ ತಂಡವು ಇನ್ನೂ ೪ ಎಸೆತಗಳು ಬಾಕಿ ಇರುವಾಗಲೇ ೩ ವಿಕೆಟ್‌ಗಳ ನಷ್ಟಕ್ಕೆ ಗೆಲುವಿನ ಗುರಿ ತಲುಪಿತು. ನಾಯಕಿ ಹರ್ಮನ್‌ಪ್ರೀತ್ ಕೌರ್ ೪೩ ಎಸೆತಗಳಲ್ಲಿ ಅಜೇಯ ೭೧ ರನ್ ಗಳಿಸುವ ಮೂಲಕ ಮುಂಬೈ ಇಂಡಿಯನ್ಸ್ ಪರ ಗರಿಷ್ಠ ರನ್ ಗಳಿಸಿದರು. ಇದಕ್ಕೂ ಮೊದಲು, ಮುಂಬೈ ಇಂಡಿಯನ್ಸ್ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಜೈಂಟ್ಸ್ ನಿಗದಿತ ೨೦ ಓವರ್‌ಗಳಲ್ಲಿ ಐದು ವಿಕೆಟ್‌ಗಳಿಗೆ ೧೯೨ ರನ್ ಗಳಿಸಿತು. ಉತ್ತಮ ಪ್ರದರ್ಶನಕ್ಕಾಗಿ ಹರ್ಮನ್‌ಪ್ರೀತ್ ಕೌರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>